# ಕುಂಭಮೇಳ–ವಿಶ್ವದ ಅತಿ ದೊಡ್ಡ ಉತ್ಸವ

ಸ್ವಾಮಿ ಆತ್ಮಶ್ರದ್ಧಾನಂದ

## ಹರಿದ್ವಾರದಲ್ಲಿ

ನಾವು ಕೊನೆಯ ಪವಿತ್ರಸ್ನಾನದ ದಿನವಾದ ಏಪ್ರಿಲ್ ೧೪ ಕ್ಕೆ ನಾಲ್ಕು ದಿನಗಳ ಮುಂಚೆಯೇ ಹರಿದ್ವಾರವನ್ನು ತಲುಪಿದೆವು. ಹರಿದ್ವಾರದ ರೈಲ್ವೇ ನಿಲ್ದಾಣವನ್ನು ಹಿಂದೂ ದೇವಾಲಯದಂತೆ ಕಟ್ಟಿದ್ದಾರೆ. ಅಲ್ಲಿ ಇಳಿದೊಡನೆಯೇ ಸುತ್ತೆಲ್ಲ ಹಬ್ಬದ ವಾತಾವರಣ ಹಬ್ಬಿರುವುದು ನಮ್ಮ ಮನಸ್ಸಿಗೆ ತಟ್ಟಿತು. ಭಾರತೀಯ ರೈಲ್ವೆಯು ಅನೇಕ ಕುಂಭ ಸ್ಪೆಷಲ್ ರೈಲುಗಳನ್ನು ಓಡಿಸುತ್ತಿದ್ದರೂ, ಅವೆಲ್ಲವೂ ಜನರಿಂದ ಕಿಕ್ಕಿರಿದು ತುಂಬಿಹೋಗಿದ್ದವು. ನಾವು ಪ್ರಯಾಣ ಮಾಡುತ್ತಿದ್ದ ರೈಲಿನಲ್ಲಿ ಕೂಡ ಶೇ. ೯೦ ಕ್ಕೂ ಹೆಚ್ಚು ಯಾತ್ರಿಗಳೇ ಇದ್ದರು.

ಒಂದು ಶತಮಾನಕ್ಕೂ ಹಿಂದೆ, ಸ್ವಾಮಿ ವಿವೇಕಾನಂದರ ಪ್ರೇರಣೆಯಿಂದ ಹರಿದ್ವಾರದ ಕನ್‌ಖಲ್‌ನಲ್ಲಿ 'ರಾಮಕೃಷ್ಣ ಸೇವಾಶ್ರಮ' ಎಂಬ ಉಚಿತ ಆಸ್ಪತ್ರೆ ಆರಂಭಗೊಂಡಿತು. ಅಲ್ಲಿಯೇ ನಮ್ಮ ನಿವಾಸ. ಅಲ್ಲಿಗೆ ಹೋಗುವ ದಾರಿಯಲ್ಲಿ, ಅನೇಕ ಸಾಧುಗಳನ್ನು ರಸ್ತೆಯುದ್ದಕ್ಕೂ ಕಂಡೆವು. ಅದಲ್ಲದೆ, 'ಯಾತ್ರಿಗಳಿಗೆ ಸ್ವಾಗತ' ಎಂಬ ಬೋರ್ಡುಗಳು ಎಲ್ಲೆಲ್ಲಿಯೂ ಕಾಣಬರುತ್ತಿದ್ದವು. ಅವುಗಳನ್ನು ಹಲವಾರು ಜನ ಸಾಧುಗಳು, ಸಂಘಸಂಸ್ಥೆಗಳು ಹಾಕಿಸಿದ್ದರು. ಕುಂಭಮೇಳದ ಸಮಯದಲ್ಲಿ ಅನೇಕ ಕಡೆ ಏರ್ಪಾಡಾಗಿರುವ ಪುರಾಣ ಕಥೆ, ಪ್ರವಚನಗಳು ನಡೆಯುವ ಸ್ಥಳ ಮತ್ತು ದಿನಾಂಕಗಳನ್ನು ಸೂಚಿಸುವ ಫಲಕಗಳೂ ಎಲ್ಲ ಕಡೆ ಇದ್ದವು. ಸೋಹಂ ಬಾಬಾ ಎಂಬ ಸಾಧುವು, 'ವಾತಾವರಣದ ತಾಪಮಾನವು ಅಧಿಕವಾಗುತ್ತಿರುವುದನ್ನು ತಡೆಯಲು ಗಂಭೀರವಾದ ಪ್ರಯತ್ನ ಮಾಡಬೇಕು' ಎಂದು ಜನರಿಗೆ ಕರೆ ನೀಡುವ ಬೋರ್ಡುಗಳನ್ನು ಬರೆಸಿ ಹಾಕಿದ್ದರು! ಹಿಂದೂಗಳಿಗೆ ತಮ್ಮ ಧರ್ಮ ಸಂಸ್ಕೃತಿಗಳನ್ನು ಉಳಿಸಿಕೊಳ್ಳಲು ಕರೆ ನೀಡುವ ಫಲಕಗಳು ಕೂಡ ಹಲವಾರು ಕಡೆ ಇದ್ದವು.



ಕನ್‌ಖಲ್ ಸೇವಾಶ್ರಮದಲ್ಲಿ ಎರಡು ಸಾವಿರ ಭಕ್ತರಿಗೆ ಉಳಿದುಕೊಳ್ಳಲು ಏರ್ಪಾಡು ಮಾಡಿದ್ದರು. ಇತರ ಆಶ್ರಮ, ಅಖಾಡಾಗಳಲ್ಲಿಯೂ ಇದೇ ತರಹದ ವ್ಯವಸ್ಥೆಯನ್ನು ಮಾಡಲಾಗಿತ್ತು. ಸೇವಾಶ್ರಮದ ಆಸ್ಪತ್ರೆ ಮೊದಲಾದ ಎಲ್ಲ ಕಟ್ಟಡಗಳೂ ದೀಪಾಲಂಕಾರದಿಂದ ಕಂಗೊಳಿಸುತ್ತಿದ್ದವು. ಸಾಂಸ್ಕೃತಿಕ ಹಾಗೂ ಧಾರ್ಮಿಕ ಕಾರ್ಯಕ್ರಮಗಳನ್ನು ನಡೆಸಲು ವರ್ಣಮಯವಾದ ಪೆಂಡಾಲ್ ಅನ್ನು ಹಾಕಲಾಗಿತ್ತು.

ಮುಂದಿನ ನಾಲ್ಕು ದಿನಗಳಲ್ಲಿ ನಿತ್ಯವೂ 'ಹರಿ ಕೀ ಪೌರಿ'ಯಲ್ಲಿ, ಬೇರೆ ಯಾತ್ರಿಗಳ ನಡುವೆಯೇ ಸ್ನಾನಮಾಡಿದೆವು. ಮೇಳದ ದಿನಗಳಲ್ಲಿ, ಊರಿನ ಒಳಗಡೆ ಪೊಲೀಸ್ ಜೀಪುಗಳು ಮತ್ತು ಕೆಲವು ಸೈಕಲ್ ರಿಕ್ಷಾಗಳನ್ನು ಬಿಟ್ಟರೆ, ಬೇರೆಲ್ಲ ವಾಹನಗಳ ಸಂಚಾರವನ್ನೂ ನಿಷೇಧಿಸಲಾಗಿತ್ತು. ಸ್ನಾನಘಟ್ಟಗಳು, ರಸ್ತೆಗಳು, ಓಣಿಗಳು – ಎಲ್ಲೆಲ್ಲೂ ಜನವೋ ಜನ! ಎಲ್ಲ ರೀತಿಯ ಸಾಂಪ್ರದಾಯಿಕ ಉಡುಪುಗಳು, ಎಲ್ಲ ರೀತಿಯ ಭಾಷೆಗಳು ಮತ್ತು ಉಪಭಾಷೆಗಳ ಪರಿಚಯ ಅಲ್ಲಿ ಆಗುತ್ತಿತ್ತು. ಸಾಧುಗಳು, ವೃದ್ಧರು, ಚಿಕ್ಕವರು, ಮಹಿಳೆಯರು, ಪುರುಷರು – ಹೀಗೆ ಎಲ್ಲಾ ವಯೋಮಾನದ, ಎಲ್ಲ ರೀತಿಯ ಜನ ಸ್ನಾನಘಟ್ಟಗಳಲ್ಲಿ ಸ್ನಾನ ಮಾಡುತ್ತಿದ್ದರು. ಸ್ನಾನ ಮಾಡುತ್ತಲೇ ಗಂಗೆಗೆ ಪೂಜೆ ಮಾಡುತ್ತಿದ್ದರು. ಕೆಲವರು ದೀಪಗಳನ್ನು ತೇಲಿಬಿಟ್ಟರೆ, ಮತ್ತೆ ಕೆಲವರು ಹಾಲು–ಜೇನುಗಳನ್ನು ಗಂಗಾನದಿಗೆ ಅರ್ಪಿಸುತ್ತಿದ್ದರು. ಗಂಗಾಮಾಯಿಯ ಬಗ್ಗೆ ಅವರೆಲ್ಲರಿಗೂ ಅದೆಷ್ಟು ಶ್ರದ್ಧೆ, ಗೌರವ!

ಕಾಯಿಲೆ, ವೃದ್ಧಾಪ್ಯಗಳಿಂದ ಬಳಲುತ್ತಿದ್ದ ತನ್ನ ತಾಯಿಯನ್ನು, ಗುಡ್ಡಗಾಡಿನ ಯುವಕನೊಬ್ಬ ತನ್ನ ಬೆನ್ನ ಮೇಲೆಯೇ ಹೊತ್ತು ಕರೆದುಕೊಂಡು ಬಂದಿದ್ದ! ನಿಲ್ಲಲೂ ತ್ರಾಣವಿಲ್ಲದ ತಾಯಿಯೊಬ್ಬಳಿಗೆ ಇನ್ನೊಬ್ಬ ಮಗ ಬೊಗಸೆಯಿಂದ ಗಂಗಾಜಲವನ್ನು ಎತ್ತಿ ತಂದು ತಂದು ಸ್ನಾನ ಮಾಡಿಸುತ್ತಿದ್ದ! ಸ್ನಾನಘಟ್ಟಗಳಲ್ಲಿ ಮಕ್ಕಳ ಸಂತೆ; ಕೆಲವರು ಚಳಿ ನೀರಿಗೆ

ಹೆದರಿ, 'ಸ್ನಾನ ಬೇಡ' ಎಂದು ಅಪ್ಪ ಅಮ್ಮಂದಿರನ್ನು ಅಂಗಲಾಚುತ್ತಿದ್ದರು. ಆದರೆ ಒಮ್ಮೆ ಗಂಗೆಯಲ್ಲಿ ಇಳಿದೊಡನೆ, ಅವರೆಲ್ಲರೂ ಉತ್ಸಾಹ, ಸಂತೋಷಗಳಿಂದ ಕಿರುಚಾಡುತ್ತಿದ್ದರು.

ಜನರು ಸ್ನಾನ ಮಾಡಿದ ಮೇಲೆ ಮೆಟ್ಟಿಲುಗಳ ಮೇಲೆ ಕುಳಿತು, ತಮ್ಮದೇ ಆದ ಬಗೆಯಲ್ಲಿ, ಸಣ್ಣ ರೀತಿಯಲ್ಲಿ ಪೂಜೆ ಪುನಸ್ಕಾರಗಳನ್ನು ಮಾಡಿಕೊಳ್ಳುತ್ತಿದ್ದರು. ನಸುಕಿಗೂ ಮುನ್ನ ಗಂಗಾಸ್ನಾನ ಮಾಡಿ, ತಾವೇ ಅಡುಗೆ ಮಾಡಿಕೊಂಡು, ದಿನಕ್ಕೆರಡು ಬಾರಿ ಮಾತ್ರ ಆಹಾರ ಸೇವಿಸುತ್ತ ನಿರ್ದಿಷ್ಟ ಸಂಖ್ಯೆಯ ಜಪವನ್ನು ಮಾಡುವ ಕೆಲವು ವ್ರತಧಾರಿಗಳೂ ಕಂಡುಬರುತ್ತಿದ್ದರು. ಒಂದು ತಿಂಗಳ ಕಾಲ ಮಾಡುವ ಈ ವ್ರತವನ್ನು 'ಕಲ್ಪವಾಸ' ಎಂದು ಕರೆಯುತ್ತಾರೆ.

ಆಶ್ರಮ, ದೇವಸ್ಥಾನಗಳ ಸುತ್ತಮುತ್ತಲೂ ಇರುವ ಸಂದುಗೊಂದಿನ ಬೀದಿಗಳಲ್ಲಿ ಅನೇಕ ಸಣ್ಣಪುಟ್ಟ ಅಂಗಡಿಗಳು ಹುಟ್ಟಿಕೊಂಡಿದ್ದವು. ಅವುಗಳಲ್ಲೆಲ್ಲ ವ್ಯಾಪಾರ ಭರದಿಂದ ಸಾಗುತ್ತಿತ್ತು. ರುದ್ರಾಕ್ಷಿ, ಸ್ಫಟಿಕಮಣಿಗಳು, ಕೆಂಪು, ಕಪ್ಪು ದಾರಗಳಿಂದ ಮಾಡಿದ ಸರಗಳು, ತಾಮ್ರ–ಹಿತ್ತಾಳೆಗಳ ಪೂಜಾಪಾತ್ರೆಗಳು, ದೇವತೆಗಳ ಚಿತ್ರಗಳು, ಭಜನೆಯ ಸಿ.ಡಿ.ಗಳು, ಪ್ರಸಾದದ ಪ್ಯಾಕೇಟುಗಳು, ವಿವಿಧ ಬಗೆಯ ತಿಂಡಿಗಳು ಮುಂತಾದ ಪದಾರ್ಥಗಳ ವ್ಯಾಪಾರ ಜೋರಾಗಿ ಸಾಗಿತ್ತು. ಕುಂಭಮೇಳಕ್ಕೆ ಬಂದ ಯಾತ್ರಿಗಳು ಬಂಧುಗಳಿಗಾಗಿ ಅನೇಕ ನೆನಪಿನ ಕೊಡುಗೆಗಳನ್ನು ಖರೀದಿಸುತ್ತಿದ್ದರು.



ಇಂದಿನ ಕಾಲಕ್ಕೆ ಅನುಗುಣವಾಗಿ ಈ ಸಲದ ಕುಂಭಮೇಳದಲ್ಲಿ ಫೋಟೋ ತೆಗೆಯುವ ಭರಾಟೆ ಹೆಚ್ಚಾಗಿತ್ತು. ಸಣ್ಣಪುಟ್ಟ ಆಚರಣೆಗಳನ್ನು ಕೂಡ, ಭೇಟಿ ನೀಡುವ ಪ್ರತಿಯೊಂದು ಸ್ಥಳವನ್ನು ಕೂಡ ತಾವು ತಂದಿದ್ದ ಡಿಜಿಟಲ್ ಕ್ಯಾಮೆರಾ ಅಥವಾ ಮೊಬೈಲ್ ಫೋನ್‌ಗಳ ಮೂಲಕ ಚಿತ್ರ ಹಿಡಿಯುವುದು ಎಲ್ಲೆಡೆ ಕಂಡುಬರುತ್ತಿತ್ತು.

ಇಡೀ ಹರಿದ್ವಾರದಲ್ಲಿ ಹಬ್ಬದ ವಾತಾವರಣ ಇತ್ತು. ಅನೇಕ ಕಟ್ಟಡಗಳಿಗೆ ಹೊಸ ಬಣ್ಣ ಬಳಿದಿದ್ದರು; ವಿದ್ಯುತ್ ಅಲಂಕಾರದಿಂದ ಸಿಂಗರಿಸಿದ್ದರು. ಶ್ರದ್ಧೆ ಮತ್ತು ಸಂತೋಷಗಳ ಪವಿತ್ರ ವಾತಾವರಣ ಹಬ್ಬಿತ್ತು. ನದೀ ಘಟ್ಟಗಳಲ್ಲಿ ಅಸಂಖ್ಯಾತ ಜನ ಸಾಲುಗಟ್ಟಿ ಹೋಗುತ್ತಿದ್ದರು. ಸಣ್ಣಪುಟ್ಟ ಗುಂಪುಗಳಲ್ಲಿ ಮಾತ್ರವಲ್ಲ, ಇಡೀ ಹಳ್ಳಿಹಳ್ಳಿಗಳ ಯಾತ್ರಿಗಳೆಲ್ಲ ಸೇರಿಕೊಂಡು ಬಂದಿದ್ದರು. ದೇವರ ಮೇಲಿನ, ಕುಂಭಮೇಳದ ಮೇಲಿನ ಮತ್ತು ಗಂಗಾಮಾತೆಯ ಮೇಲಿನ ಜನಪದ ಗೀತೆಗಳನ್ನು ಒಟ್ಟಾಗಿ ಹಾಡಿಕೊಳ್ಳುತ್ತ ಗ್ರಾಮೀಣ ಮಹಿಳೆಯರು ಗುಂಪುಗುಂಪಾಗಿ ಬರುತ್ತಿದ್ದರು. ಅವರಲ್ಲಿ ಕುಂಭಮೇಳಕ್ಕೆ ಬಂದ ಸಂತೋಷ ಎದ್ದುಕಾಣುತ್ತಿತ್ತು. ಹೀಗೆ ಕುಣಿಯುತ್ತ, ಭಜನೆಯನ್ನು ಹಾಡುತ್ತ, ಕರತಾಳಗಳನ್ನು ಹಾಕುತ್ತ ಬರುತ್ತಿದ್ದ ಮಹಿಳೆಯರ ಹಲವಾರು ಗುಂಪುಗಳನ್ನು ನಾವು ನೋಡಿದೆವು. ರಾತ್ರಿ ಹೊತ್ತು ಅಡ್ಡಾಡುವಾಗ, ಮರಗಳ ಕೆಳಗೆ ಚಾಪೆ ಅಥವಾ ಬಟ್ಟೆ ಹಾಸಿಕೊಂಡು ಮಲಗಿದ್ದ ಅನೇಕ ಯಾತ್ರಿಗಳನ್ನು ಗಮನಿಸಿದೆವು. ಅವರು ತಾವು ತಂದ ಸಣ್ಣ ಸೀಮೆಎಣ್ಣೆ ಸ್ಟೌವ್ ಮೇಲೆ ಅಥವಾ ಎರಡು ಇಟ್ಟಿಗೆಗಳ ನಡುವೆ ಕಟ್ಟಿಗೆ, ಪುರುಳೆ ಹಾಕಿಕೊಂಡು, ಬೆಂಕಿ ಹೊತ್ತಿಸಿ, ಚಪಾತಿ, ತೊವ್ವೆ ಅಡುಗೆ ಮಾಡಿಕೊಂಡು ಉಣ್ಣುತ್ತಿದ್ದರು.

(ಮುಂದುವರಿಯುವುದು)

**ಸುದ್ದಿ ಸಂಚಯ**

## ರಾಮಕೃಷ್ಣ ಮಿಷನ್ ವತಿಯಿಂದ ಗೃಹನಿರ್ಮಾಣ ಯೋಜನೆ





ರಾಯಚೂರು ಜಿಲ್ಲೆಯ ಸಿಂಧನೂರು ತಾಲ್ಲೂಕಿನ ಚಿಂತಮಾನದೊಡ್ಡಿ ಗ್ರಾಮದಲ್ಲಿ, 2009 ರ ಅಕ್ಟೋಬರ್ ತಿಂಗಳಿನಲ್ಲಿ ಭಾರೀ ಮಳೆ ಮತ್ತು ಪ್ರವಾಹದಲ್ಲಿ ಸಂತ್ರಸ್ತರಾದ ಜನರಿಗೆ ಮನೆಗಳನ್ನು ಕಟ್ಟಿಕೊಡಲಾಗುತ್ತಿದೆ. ಇನ್ಫೋಸಿಸ್ ಸಂಸ್ಥೆಯ ಧನಸಹಾಯದೊಂದಿಗೆ, ಬೆಳಗಾವಿಯ ರಾಮಕೃಷ್ಣ ಮಿಷನ್ ಆಶ್ರಮ ಮತ್ತು ಮೈಸೂರಿನ ಶ್ರೀರಾಮಕೃಷ್ಣ ಆಶ್ರಮಗಳು ಜೊತೆಯಾಗಿ ಈ ಮನೆಗಳನ್ನು ನಿರ್ಮಾಣ ಮಾಡುತ್ತಿವೆ. ಕಟ್ಟಲು ಉದ್ದೇಶಿಸಿರುವ ಒಟ್ಟು 143 ಮನೆಗಳಲ್ಲಿ, 125 ಮನೆಗಳು ಈಗಾಗಲೇ ಸಂಪೂರ್ಣವಾಗಿದ್ದು, ಉಳಿದವುಗಳು ನಿರ್ಮಾಣದ ವಿವಿಧ ಹಂತಗಳಲ್ಲಿವೆ. ಇನ್ನು ಕೆಲವೇ ದಿನಗಳಲ್ಲಿ ಪೂರ್ಣ ಕಾಮಗಾರಿಯು ಪೂರ್ತಿಗೊಳ್ಳಲಿದೆ.